ನಾವು ಕೊಡಗು ಜಿಲ್ಲೆಯಲ್ಲಿ ಹೆಂಡದವಾರಾಟವನ್ನು ನಿಲ್ಲಿಸಿದ್ದೇವೆ. ಬೀದರ್ ಜಿಲ್ಲೆಯಲ್ಲಿ ನಿಲ್ಲಿಸಿದ್ದೇವೆ. ಕೊಡಗು ಜಿಲ್ಲೆಯಲ್ಲಿ ಈ ಉದ್ಯೋಗದ ಮೇಲೆ ಅವಲಂಬಿಸಿದಂತಹವರು ಬಹಳ ಕಡಿಮೆ ಇದ್ದರು, ಅವರು ಬೇರೆ ಉದ್ಯೋಗ ಕೊಡಿ ಎಂದು ಕೇಳಲಿಲ್ಲ. ಬೀದರ್‌ನಲ್ಲಿ ಅದೇ ರೀತಿಯಾಯಿತು. ನಮ್ಮ ನೀತಿ ಈ ರಾಜ್ಯದಲ್ಲಿ ಹಂತ ಹಂತವಾಗಿ ಈ ಹೆಂಡದ ವಾರಾಟ ಮಾಡತಕ್ಕಂಥಾದ್ದನ್ನು ನಿಲ್ಲಿಸಬೇಕು ಎಂಬುದು, ನಮ್ಮ ನೀತಿ ಇದೇ ರಾಜ್ಯಕ್ಕೆ ಸಂಬಂಧವಿರುವುದರಿಂದ ಇದಕ್ಕೆ ಒಂದು ವ್ಯವಸ್ಥೆ ಮಾಡಬೇಕು. ಈಗ ಅದಕ್ಕೊಂದು ಯೋಜನೆಯನ್ನು ತಯಾರು ಮಾಡುತ್ತಿದ್ದೇವೆ. ಇದಕ್ಕೆ ಎಕ್ಸ್‌ಸೈಜ್ ಡಿಪಾರ್ಟ್‌ಮೆಂಟ್ ಮತ್ತು ಇಂಡಸ್ಟ್ರಿ ಡಿಪಾರ್ಟ್‌ಮೆಂಟ್ ಸೇರಿ ಒಂದು ಬದಲಿ ವ್ಯವಸ್ಥೆ ಮಾಡಬೇಕಾಗಿದೆ. ಇವರಿಗೆ ಉದ್ಯೋಗ ಕೊಡತಕ್ಕಂಥಾ ಜವಾಬ್ದಾರಿಯನ್ನು ನಾವು ತೆಗೆದು ಕೊಳ್ಳುತ್ತೇವೆ. ತಾವು ಕಣ್ಣೀರು ಸುರಿಸುವ ಅಗತ್ಯವಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾವು ರಿಲೀಫ್ ಕೊಡಿ ಎಂದು ಮಾತ್ರ ಕೇಳಿದೆವು. ಕಣ್ಣೀರು ಸುರಿಸಲಿಲ್ಲ.

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು.—ಚಿನ್ನಪ್ಪನವರೇ ತಾವು ಕೂತುಕೊಳ್ಳಿ. ನೀಲಕಂಠಪ್ಪನವರೇ ತಾವು ಮಾನ್ಯ ಮಂತ್ರಿಗಳ ಗಮನ ಸೆಳೆಯಿರಿ.

2. ಎಸ್, ಎಸ್. ಎಲ್. ಸಿ. ಮಧ್ಯಂತರ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಕಾಲೇಜುಗಳಲ್ಲಿ ಪ್ರವೇಶ ಸಿಗದೆ ಅನಾನುಕೂಲ ಆಗಿರುವ ಬಗ್ಗೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ ರಾಜ್ಯದಲ್ಲಿ ಎಸ್. ಎಸ್. ಎಲ್. ಸಿ ಮಧ್ಯಂತರ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಹೊರ ಬರುವ ವಿದ್ಯಾರ್ಥಿಗಳಿಗೆ ಕಾಲೇಜುಗಳಲ್ಲಿ ಪ್ರವೇಶ ಸಿಗದೆ ಉಂಟಾಗಿರುವ ಅನಾನುಕೂಲಗಳ ಬಗ್ಗೆ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಿ. ಸೋಮಶೇಖರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ,

ಸರ್ಕಾರವು ಆದೇಶ ಸಂಖ್ಯೆ ಇಡಿ ೫೧ ಎಸ್‌ಇಕ್ಯೂಎಂ ೮೭, ದಿನಾಂಕ ೩೦-೯-೧೯೮೭ರಲ್ಲಿ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯನ್ನು ಮಾರ್ಚ್ ತಿಂಗಳಲ್ಲಿ ಮತ್ತು ಸಪ್ಲಿಮೆಂಟರಿ ಪರೀಕ್ಷೆಯನ್ನು ಆಕ್ಟೋಬರ್ ಬದಲಾಗಿ ಜೂನ್ ತಿಂಗಳಿನಲ್ಲಿ ನಡೆಯುವಂತೆ ಆದೇಶಿಸಿದೆ. ಇದರ ಉದ್ದೇಶ ಎಸ್.ಎಸ್.ಎಲ್.ಸಿ. ಮಾರ್ಚ್ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಒಂದು ವರ್ಷ ಶೈಕ್ಷಣಿಕವಾಗಿ ನಷ್ಟ ಉಂಟಾಗಬಾರದೆಂದು ಸಪ್ಲಿಮೆಂಟರಿ ಪರೀಕ್ಷೆಯನ್ನು ಜೂನ್ ತಿಂಗಳಿನಲ್ಲಿ ನಡೆಸಿ, ಆದರಲ್ಲಿ ಪಾಸಾದ ವಿದ್ಯಾರ್ಥಿಗಳು ಅದೇ ಶೈಕ್ಷಣಿಕ ವರ್ಷದಲ್ಲಿ ಪದವಿ ಪೂರ್ವ ತರಗತಿಗಳಿಗೆ ಪ್ರವೇಶ ಪಡೆಯುವಂತೆ ಅನುಕೂಲವಾಗಲೆಂದು ಸರ್ಕಾರವು ತೀರ್ಮಾನಿಸಿದೆ. ಈ ಹಿನ್ನೆಲೆಯಲ್ಲಿ ಮುಂಬರುವ ಜೂನ್ ತಿಂಗಳಿನಲ್ಲಿ ನಡೆಯುವ ಸಪ್ಲಿಮೆಂಟರಿ ಪರೀಕ್ಷೆಯ ಫಲಿತಾಂಶ ಬರುವವರೆಗೆ ಪದವಿ ಪೂರ್ವ ತರಗತಿಗಳಿಗೆ ಕಾಲೇಜುಗಳಲ್ಲಿ ದಾಖಲಾತಿಗಳನ್ನು ಮಾಡಕೂಡದೆಂದೂ ಆಮೆ ಪ್ರವೇಶಗಳಿಗೆ ಅರ್ಜಿಗಳನ್ನು ಸ್ವೀಕರಿಸಬಹುದೆಂದು ಎಲ್ಲಾ ಕಾಲೇಜುಗಳಿಗೆ ನಿರ್ದೇಶನ ನೀಡುವಂತೆ ಪದವಿ ಪೂರ್ವ ಶಿಕ್ಷಣ ನಿರ್ದೇಶಕರಿಗೆ ಸರ್ಕಾರವು ಸಂಖ್ಯೆ ಇಡಿ ೧೧೭ ಟಿಪಿಯು ೮೮ ದಿನಾಂಕ ೧೨-೫-೮೮ರಲ್ಲಿ ಆದೇಶ ನೀಡಿದೆ. ಇದರಂತೆ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ದಿನಾಂಕ ೨೫-೫-೮೮ ರಂದು ಎಲ್ಲಾ ಪದವಿ ಪೂರ್ವ ಕಾಲೇಜುಗಳಿಗೆ ಸುತ್ತೋಲೆಯನ್ನು ಹೊರಡಿಸಿರುತ್ತಾರೆ.

ಶ್ರೀ ಬಿ ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ದಿನಾಂಕ ೧೨-೫-೮೮ ರಂದು ಪದವಿ ಪೂರ್ವ ಶಿಕ್ಷಣ ನಿರ್ದೇಶಕರಿಗೆ ಸರ್ಕಾರವು ಒಂದು ಆದೇಶವನ್ನು ಕಳುಹಿಸಿ, ಅದರಲ್ಲಿ, ಕಾಲೇಜುಗಳಲ್ಲಿ ದಾಖಲಾತಿಗಳನ್ನು ಮಾಡಕೂಡದೆಂದೂ, ಆದರೆ ಪ್ರವೇಶಗಳಿಗೆ ಅರ್ಜಿಗಳನ್ನು ಸ್ವೀಕರಿಸಬಹುದೆಂದು

ಈ ಬಗ್ಗೆ ಎಲ್ಲಾ ಕಾಲೇಜುಗಳಿಗೆ ನಿರ್ದೇಶನ ನೀಡುವಂತೆ ಹೇಳಲಾಗಿದೆಯೆಂದು ಮಾನ್ಯ ಶಿಕ್ಷಣ ಸಚಿವರು ಹೇಳಿದ್ದಾರೆ. ಇದರಿಂದ ದೊಡ್ಡ ಸಮಸ್ಯೆ ಉದ್ಭವವಾಗಿದೆ. ಏನೆಂದರೆ, ಹೋದ ವರ್ಷ ಅಕ್ಟೋಬರ್ ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಪಾಸ್ ಆದ ವಿದ್ಯಾರ್ಥಿಗಳು ಮತ್ತು ಈ ವರ್ಷ ಮಾರ್ಚ್‌ನಲ್ಲಿ ನಡೆದ ಪರೀಕ್ಷೆಯಲ್ಲಿ ಪಾಸ್ ಆದ ವಿದ್ಯಾರ್ಥಿಗಳು ಹಾಗೂ ಇದೇ ವರ್ಷ ಜೂನ್‌ನಲ್ಲಿ ನಡೆದ ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಪಾಸ್ ಆದ ವಿದ್ಯಾರ್ಥಿಗಳು ಎಲ್ಲಾ ಒಂದೇ ಸಾರಿ ಕಾಲೇಜುಗಳಿಗೆ ಸೇರುವುದಕ್ಕೆ ಅರ್ಜಿಗಳನ್ನು ಹಾಕುತ್ತಾರೆ. ಈಗ ಕಾಲೇಜುಗಳಲ್ಲಿ ಏನಾಗಿದೆ ಎಂದರೆ, ಅಡ್ಮಿಷನ್ ಫಾರ್ಮ್ ಯಾರಿಗೂ ಸಿಕ್ಕುತ್ತಿಲ್ಲ. ಒಂದೊಂದು ಫಾರಂಗೆ ಒಂದು ಸಾವಿರ ರೂಪಾಯಿಗಳಿಗೂ ಮೇಲ್ಪಟ್ಟು ಮಾರಾಟ ವಾಗುತ್ತಿದೆ. ಈ ರೀತಿ ಆಗುವುದನ್ನು ತಡೆಗಟ್ಟುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಖಾಸಗಿ ಕಾಲೇಜಿನವರು ಇಂತಿಷ್ಟು ಸೀಟುಗಳನ್ನು ಈ ವರ್ಷ ಜೂನ್ ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಪಾಸ್ ಆದ ವಿದ್ಯಾರ್ಥಿಗಳಿಗೆ ಕೊಡಬೇಕೆಂದು ಸರ್ಕಾರ ಆದೇಶ ಕೊಡಬೇಕು. ಸರ್ಕಾರದವರು ಎಸ್ ಎಸ್.ಎಲ್.ಸಿ.ಯಲ್ಲಿ ಫೇಲ್ ಆದ ವಿದ್ಯಾರ್ಥಿಗಳಿಗೆ ಪುನಃ ಜೂನ್‌ನಲ್ಲಿ ಸಪ್ಲಿಮೆಂಟರಿ ಪರೀಕ್ಷೆಯನ್ನು ನಡೆಸುವುದರಿಂದ ಬಹಳಷ್ಟು ಜನ ಪಾಸ್ ಆಗುತ್ತಾರೆ. ಅವಸರ ಅವಸರವಾಗಿ ಪರೀಕ್ಷೆಗಳನ್ನು ನಡೆಸಿದರೆ ಏನಾಗುತ್ತದೆ ಎಂದರೆ. ಒಂದು ಮಗುವಿಗೆ ತಿಂಗಳು ಆಗುವುದಕ್ಕಿಂತ ಮುಂಚೆ ಹೆಣ್ಣೇ ತಿಂಗಳಲ್ಲ ಅಥವಾ ಒಂಭತ್ತೇ ತಿಂಗಳಿನಲ್ಲಿ ಹುಟ್ಟಿದ ಹಾಗೆ ಆಗುತ್ತದೆ. ಸರ್ಕಾರದವರು ಈ ರೀತಿ ಅವಸರವಾಗಿ ಪರೀಕ್ಷೆಗಳನ್ನು ನಡೆಸುವುದು ಸೂಕ್ತವಲ್ಲ. ಇದರಿಂದ ಸರ್ಕಾರಕ್ಕೂ ತೊಂದರೆಯಾಗುತ್ತದೆ ಮತ್ತು ಅಡ್ಮಿನಿಸ್ಟ್ರೇಷನ್ ನಡೆಸುವುದಕ್ಕೂ ತೊಂದರೆಯಾಗುತ್ತದೆ. ಈ ನಿಯಮವನ್ನು ಬದಲಾವಣೆ ಮಾಡಿ ಇಲ್ಲದಿದ್ದರೆ ಜೂನ್ ತಿಂಗಳ ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಪಾಸ್ ಆದ ವಿದ್ಯಾರ್ಥಿಗಳಿಗೆ ಸೀಟುಗಳನ್ನು ರಿಸರ್ವ್ ಮಾಡಬೇಕೆಂದು ಎಲ್ಲಾ ಕಾಲೇಜುಗಳಿಗೆ ಆದೇಶ ಕೊಡಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಸನ್ಮಾನ್ಯ ಅಧ್ಯಕ್ಷರೇ, ಪದವಿಪೂರ್ವ ಕಾಲೇಜುಗಳಲ್ಲಿ ಸೀಟುಗಳೆಲ್ಲಾ ಭರ್ತಿಯಾಗಿವೆಯೆಂದು ಎಲ್ಲಾ ಕಾಲೇಜುಗಳ ಮುಂದೆ ಬೋರ್ಡ್ ಹಾಕಿದ್ದಾರೆ. ಇದು ಬೆಂಗಳೂರಿನಲ್ಲಿ ಅಷ್ಟೇಅಲ್ಲ ಕರ್ನಾಟಕದ ಮೂಲೆಮೂಲೆಯ ಲ್ಲಿರುವ ಕಾಲೇಜುಗಳಲ್ಲೆಲ್ಲಾ ಇದೇ ತರಹ ಆಗಿದೆ. ಜೂನ್‌ನಲ್ಲಿ ಸಪ್ಲಿಮೆಂಟರಿ ಪರೀಕ್ಷೆ ನಡೆಸುವುದರಿಂದ ಈ ವರ್ಷದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಬಹಳ ಜನ ತೇರ್ಗಡೆಯಾಗುತ್ತಾರೆ. ಮಾರ್ಚ್‌ನಲ್ಲಿ ಪಾಸ್ ಆದವರಿಗೇ ಸೀಟುಗಳು ಸಿಗುತ್ತಿಲ್ಲ ಅಂದ ಮೇಲೆ ಜೂನ್ ತಿಂಗಳಿನಲ್ಲಿ ಪಾಸ್ ಆದ ವಿದ್ಯಾರ್ಥಿಗಳಿಗೆ ಸೀಟುಗಳು ಹೇಗೆ ಸಿಗುತ್ತವೆ? ಮಾನ್ಯ ಸಚಿವರು ಕೊಟ್ಟಿರುವ ಉತ್ತರವನ್ನು ನೋಡಿದರೆ, ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಸ್ವೀಕಾರ ಮಾಡಿ, ಆದರೆ ಅಡ್ಮಿಷನ್ ಕೊಡಬೇಡಿ ಎಂದು ಹೇಳಿದ್ದಾರೆ ಎಂದು ಹೇಳಿದ್ದಾರೆ ಎಂದು ತಿಳಿದು ಬರುತ್ತದೆ. ಈ ರೀತಿ ಏಕೆ ಮಾಡಬೇಕಾಗಿತ್ತು? ಜೂನ್ ತಿಂಗಳಲ್ಲಿ ನಡೆಯುವ ಸಪ್ಲಿಮೆಂಟರಿ ಪರೀಕ್ಷೆಯ ರಿಸಲ್ಟ್ ಬಂದ ಮೇಲೆ ಒಂದೇ ಸಾರಿ ಕಾಲೇಜುಗಳಲ್ಲಿ ಪ್ರವೇಶ ಕೊಡುವ ವ್ಯವಸ್ಥೆಯನ್ನು ಮಾಡಬಹುದಾಗಿತ್ತು. ಮಾರ್ಚ್ ತಿಂಗಳಿನಲ್ಲಿ ಪಾಸ್ ಆದ ವಿದ್ಯಾರ್ಥಿಗಳಿಗೆ ಕಾಲೇಜುಗಳಲ್ಲಿ ಸೀಟು ಸಿಕ್ಕಿಲ್ಲವೆಂದರೆ ಜೂನ್ ತಿಂಗಳ ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಫಾಸ್ ಆಗಿರುವ ವಿದ್ಯಾರ್ಥಿಗಳ ಗತಿ ಏನು? ಈ ಸಮಸ್ಯೆಗೆ ಸರ್ಕಾರ ಏನಾ ವ್ಯವಸ್ಥೆಯನ್ನು ಮಾಡುತ್ತದೆಂದು ನಾನು ಕೇಳುತ್ತೇನೆ?

ಶ್ರೀ ಚಂದ್ರಶೇಖರ ಮಾವಳಿ.—ಮಾನ್ಯ ಅಧ್ಯಕ್ಷರೇ, ಮಾರ್ಚ್ ತಿಂಗಳಿನಲ್ಲಿ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಾಸ್ ಆದ ವಿದ್ಯಾರ್ಥಿಗಳಲ್ಲೇ ಕೆಲವರಿಗೆ ಕಾಲೇಜುಗಳಲ್ಲಿ ಸೀಟು ಸಿಕ್ಕಿಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲೂ ಇದೇ ತರಹ ಸಮಸ್ಯೆ ಬಂದಿದೆ. ಎಲ್ಲಾ ಕಾಲೇಜುಗಳಲ್ಲೂ ಸೀಟುಗಳು ಭರ್ತಿಯಾಗಿವೆ. ಇನ್ನು ಸೀಟುಗಳು ಖಾಲಿ ಇಲ್ಲ ಎನ್ನುವ ಮಾತನ್ನು ಕಾಲೇಜುಗಳವರು ಹೇಳುತ್ತಿದ್ದಾರೆ. ಮಾರ್ಚ್ ತಿಂಗಳಿನಲ್ಲಿ ಪಾಸ್ ಆದವರಿಗೆ ಸೀಟು ಸಿಕ್ಕಿಲ್ಲವೆಂದರೆ ಜೂನ್ ತಿಂಗಳಿನಲ್ಲಿ ನಡೆಯುವ ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಪಾಸ್ ಆದ ವಿದ್ಯಾರ್ಥಿಗಳಿಗೆ ಸೀಟುಗಳು ಎಲ್ಲಿಂದ ಸಿಗುತ್ತವೆ? ಜೂನ್ ತಿಂಗಳಿನಲ್ಲಿ ನಡೆಯುವ ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಪಾಸ್ ಆದ ವಿದ್ಯಾರ್ಥಿಗಳಿಗೆ ಎಲ್ಲಾ ಕಾಲೇಜುಗಳಲ್ಲಿ ಇಂತಿಷ್ಟು ಸೀಟುಗಳನ್ನು ಕೊಡಲೇ ಬೇಕೆಂದು ರಿಸರ್ವ ಮಾಡಿಸಿದ್ದೀರಾ? ರಿಸರ್ವ ಮಾಡಿಸಬೇ ಇದ್ದರೆ ಏಕೆ ಮಾಡಿಸಲಿಲ್ಲ? ಜೂನ್ ತಿಂಗಳಿನಲ್ಲಿ ಪಾಸ್ ಆದ ವಿದ್ಯಾರ್ಥಿಗಳಿಗೆ ಕಾಲೇಜುಗಳಲ್ಲಿ ಸೀಟು ಸಿಕ್ಕುವ ಬಗ್ಗೆ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲವೆಂಬ ನಾನು ಸ್ಪಷ್ಟವಾಗಿ ತಮ್ಮ ಮೂಲಕ

ಹೇಳುತ್ತಿದ್ದೇನೆ. ಈಗಲಾದರೂ ಸರ್ಕಾರ ಇದರ ಬಗ್ಗೆ ತಕ್ಷಣ ಗಮನ ಹರಿಸಿ ಜೂನ್ ತಿಂಗಳಿನ ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಎಲ್ಲಾ ಕಾಲೇಜಿನವರು ಇಂತಿಷ್ಟು ಸೀಟುಗಳನ್ನು ರಿಸರ್ವ್ ಮಾಡಬೇಕೆಂಬ ನಿಯಮವನ್ನು ಕೂಡಲೇ ಜಾರಿ ಮಾಡಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್.—ಮಾನ್ಯ ಅಧ್ಯಕ್ಷರೆ. ಈ ಒಂದು ವ್ಯವಸ್ಥೆಯನ್ನು ತಂದ ಉದ್ದೇಶ ಏನೆಂದರೆ, ಯಾವ ವಿದ್ಯಾರ್ಥಿಯೂ ಕೂಡ ಕೆಲವು ಅಂಕಗಳಿಂದ, ಒಂದೆರಡು ಸಬ್ಜೆಕ್ಟ್‌ಗಳಲ್ಲಿ ಫೈಲಾಗಿ ಒಂದು ವರ್ಷದವರೆಗೆ ಸುಮ್ಮನೆ ಕಾಲಹರಣ ಮಾಡುತ್ತಾ ಕೂರುವ ಪರಿಸ್ಥಿತಿ ಬರಬಾರದು ಎಂಬುದಕ್ಕೋಸ್ಕರವಾಗಿ. ಹೀಗೆ ಅನಿವಾರ್ಯ ಕಾರಣಗಳಿಂದ ಫೇಲಾದ ವಿದ್ಯಾರ್ಥಿಗಳು ಕಟ್ಟು ದಾರಿಗೆ ಇಳಿಯುವ ಸಂಭವ ಸಂದರ್ಭಗಳು ಇವೆ. ಅಥವಾ ತಂದೆತಾಯಿಗಳಿಗೆ ಹೊರೆಯಾಗಿ ಇರುವ ಸಂದರ್ಭಗಳು ಬರುತ್ತವೆ; ಸುಮ್ಮನೆ ಕಾಲವ್ಯಯ ಮಾಡುವ ಪರಿಸ್ಥಿತಿ ಇದ್ದರೆ, ಅವರನ್ನು ಬೇರೆ ದಾರಿಗೆ ಕೊಂಡೊಯ್ಯುವ ಪರಿಸ್ಥಿತಿಯು ಉದ್ಭವವಾಗುತ್ತದೆ. ಇಂತಹ ಕಾರಣಗಳಿಗಾಗಿ ಅವರು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿಕೊಂಡು ಹೋಗಬೇಕೆಂಬ ಸದುದ್ದೇಶದಿಂದ ಈ ವ್ಯವಸ್ಥೆಯನ್ನು ಜಾರಿಗೆ ತಂದಿದ್ದೇವೆ. ಈಗ ಮಾರ್ಚ್ ತಿಂಗಳಲ್ಲಿ ಪರೀಕ್ಷೆಯನ್ನು ನಡೆಸಿ, ಆದರ ಫಲಿತಾಂಶವು ಬಂದಿದೆ. ಮತ್ತೊಂದು ಪರೀಕ್ಷೆಯನ್ನು ಜೂನ್ ತಿಂಗಳಲ್ಲಿ ತೆಗೆದುಕೊಳ್ಳಲಿದ್ದೇವೆ, ಮಾರ್ಚ್ ತಿಂಗಳಲ್ಲಿ ಫೈಲ್ ಆದವರು ಜೂನ್‌ನಲ್ಲಿ ಪುನಃ ಪರೀಕ್ಷೆಗೆ ಹಾಜರಾಗುತ್ತಾರೆ. ಮಾನ್ಯ ಸದಸ್ಯರಾದ ನಿಲಂಕಂಪ್ಪನವರು ಒಂಬತ್ತು ತಿಂಗಳಲ್ಲಿ ಜನಿಸಿದ ಶಿಶುವಿಗೂ ೫-೬ ತಿಂಗಳಲ್ಲಿ ಜನಿಸಿದ ಶಿಶುವಿಗೂ ಇರುವ ಶಕ್ತಿ ಬಗ್ಗೆ ಹೇಳಿದ್ದಾರೆ. ಒಬ್ಬ ವಿದ್ಯಾರ್ಥಿಗೆ ೮ ದಿವಸಗಳಲ್ಲಿ ಒಂದು ಪರೀಕ್ಷೆಯನ್ನು ಪಾಸ್ ಮಾಡತಕ್ಕಂಥ ಒಂದು ಶಕ್ತಿ ಸಾಮರ್ಥ್ಯ ಇವ್ವರೆ ಅಂಥವರಿಗೆ ನಾವು ಏಕೆ ಅವಕಾಶವನ್ನು ಕೊಡಬಾರದು? ಹೀಗೆ ಅನಿವಾರ್ಯತೆಯಿಂದ ಅಥವಾ ಬೇರೆ ಕಾರಣಗಳಿಗಾಗಿ ಫೈಲ್ ಆದವರಿಗೆ ಒಂದು ಅವಕಾಶವನ್ನುಕೊಟ್ಟು ಅವರಿಗೆ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲಿಸಿಕೊಡುವುದು ಸರ್ಕಾರದ ಉದ್ದೇಶವಾಗಿದೆ.

ಈಗ ಕಾಲೇಜು ಪ್ರವೇಶಾವಕಾಶದ ವಿಚಾರದಲ್ಲಿ ಹೇಳುವುದಾಗಿದೆ. ಮಾರ್ಚ್ ತಿಂಗಳಲ್ಲಿ ಪಾಸಾದಂಥ ವಿದ್ಯಾರ್ಥಿಗಳು ಪ್ರವೇಶಕ್ಕೆ ಅರ್ಜಿಯನ್ನು ಸಲ್ಲಿಸಬಹುದು, ಜೂನ್ ತಿಂಗಳಲ್ಲಿ ಪಾಸಾದವರು ಕೂಡ ಅರ್ಜಿಯನ್ನು ಪಾಸಾದ ನಂತರ ಸಲ್ಲಿಸಬಹುದು. ಎಲ್ಲಾ ಕಾಲೇಜುಗಳ ಜುಲೈನಲ್ಲಿ ಜೂನ್ ತಿಂಗಳ ಪರೀಕ್ಷೆಯ ಫಲಿತಾಂಶ ಬರುವವರೆಗೆ ಯಾವುದೇ ಪ್ರವೇಶವನ್ನು ಪೂರ್ಣಗೊಳಿಸಬಾರದು ಎಂದು ನಿರ್ದೇಶನ ಕೊಟ್ಟಿದ್ದೇವೆ. ಒಂದು ಪಕ್ಷ ಯಾವುದಾದರೂ ಕಾಲೇಜಿನವರು ಪ್ರವೇಶಾವಕಾಶವನ್ನು ಈಗಾಗಲೇ ಮುಗಿಸಿದ್ದರೆ, ಅದನ್ನು ನಾವು ರದ್ದು ಮಾಡುತ್ತೇವೆ. ಜೂನ್ ತಿಂಗಳ ಸಪ್ಲಿಮೆಂಟರಿ ಪರೀಕ್ಷೆಯಲ್ಲಿಯೂ ಪಾಸಾದ ಅರ್ಹ ವಿದ್ಯಾರ್ಥಿಗಳಿಗೆ ಈ ವರ್ಷದ ಪ್ರವೇಶಾವಕಾಶ ಸಿಗಬೇಕು ಎಂದು ಈ ರೀತಿ ಮಾಡಿದ್ದೇವೆ. ಒಂದು ವೇಳೆ ಈಗಾಗಲೇ ಮುಗಿಸಿದ್ದರೂ ಕೂಡ ಆದನ್ನು ಮೊದಲೇ ಹೇಳಿದ ಹಾಗೆ ರದ್ದು ಮಾಡಿ ಎರಡೂ ಪರೀಕ್ಷೆಗಳಲ್ಲಿ ಪಾಸಾದ ವಿದ್ಯಾರ್ಥಿಗಳ ಫಟ್ಟಿಯನ್ನು ಮಾಡಿ ಅರ್ಹತೆಯ ಆಧಾರದ ಮೇಲೆ ಅವಕಾಶವನ್ನು ದೊರಕಿಸಿಕೊಡುವ ವ್ಯವಸ್ಥೆಯನ್ನು ಮಾಡುತ್ತೇವೆ. ಇದರ ಉದ್ದೇಶ ಪಾಸ್ ಆದಂಥ ಎಲ್ಲ ವಿದ್ಯಾರ್ಥಿಗಳಿಗೂ ಪ್ರವೇಶಾವಕಾಶ ಕೊಡಬೇಕೆನ್ನುವಂಥಾದ್ದು ಅಲ್ಲ. ಮತ್ತು ಎಲ್ಲರಿಗೂ ಸೀಟ್ ಕೊಡಬೇಕಾಗುತ್ತದೆ ಎಂದು ಕೆಲವರನ್ನು ಫೇಲ್ ಮಾಡುವಂಥಾದ್ದು ಕೂಡ ಸರ್ಕಾರದ ನೀತಿಯಲ್ಲ. ಪಾಸ್ ಮಾಡಿದವರೆಲ್ಲರೂ ತಮ್ಮ ವಿದ್ಯಾಭ್ಯಾಸವನ್ನು ಒಂದೇ ದಿಕ್ಕಿನಲ್ಲಿ ಮುಂದುವರಿಸುವುದಿಲ್ಲ. ಕೆಲವರು ಬೇರೆ ಬೇರೆ ಉದ್ಯೋಗಗಳಿಗೆ, ಬೇರೆ ಬೇರೆ ರೀತಿಯ ಶಿಕ್ಷಣಕ್ಕೆ, ವೃತ್ತಿಪರ ಶಿಕ್ಷಣಕ್ಕೆ, ಹೀಗೆ ಬೇ ಬೇರೆ ಕಡೆಗಳಿಗೆ ಹೋಗುವ ಸಂದರ್ಭಗಳು ಇವೆ. ಆದರೆ ಒಬ್ಬ ವಿದ್ಯಾರ್ಥಿ ತಾನು ಆನರ್ಸ್‌ಗೆ ತೀರ್ಣನಾಗಿದ್ದೇನೆ ಎಂದು ಕೋರಲು ಅವಕಾಶವನ್ನು ಕೊಡಬಾರದು, ಅವನು ಪಾಸ್ ಆದರೆ ಅವನಿಗೆ ಒಂದು ತರಹದ ಸಮಾಧಾನ ಬರುತ್ತದೆ ಎಂಬ ಕಾರಣಕ್ಕಾಗಿ ಈ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ. ಆ ಒಂದು ಸಮಾಧಾನ ವಿದ್ಯಾರ್ಥಿಗಳಲ್ಲಿ ಇರಬೇಕು. ಹೊಸದ ವರ್ಷದ ಒಂದು ಶೀರ್ಮಾನದ ಹಾಗೆ ರಾಜ್ಯದಲ್ಲಿನ ಳ್ಳಿ ಕಿರಿಯ ಕಾಲೇಜುಗಳನ್ನು ಅಲ್ಲಿ ವಿದ್ಯಾರ್ಥಿಗಳು ಕಡಿಮೆ ಎಂಬ ಕಾರಣಕ್ಕಾಗಿ ಮುಚ್ಚಬೇಕೆಂದಿದ್ದೆವು. ಆದರೆ ಈಗ ಒಂದು ಹಳ್ಳಿ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾದರೆ ಅಲ್ಲಿ ಸಂಖ್ಯೆಯು ಕೂಡ ಜಾಸ್ತಿಯಾಗಬಹುದು. ಆ ಒಂದು ಸದವಕಾಶ ಕೂಡ ಇದೆ. ಹಾಗೆಯೇ ಬೇರೆ ಬೇರೆ ಸಾಕಷ್ಟು ಅವಕಾಶಗಳಿವೆ.

ಕೇಂದ್ರ ಸರ್ಕಾರದ ಒಂದು ನೀತಿಯ ಪ್ರಕಾರ ಪಿ.ಯು.ಸಿ. ಮಟ್ಟದಲ್ಲಿ ವೃತ್ತಿಪರ ಶಿಕ್ಷಣವನ್ನು ಕೊಡ ಬೇಕಾಗಿರುತ್ತದೆ.ಈ ದಿಶೆಯಲ್ಲಿ ಈಗ ವೃತ್ತಿಪರ ಶಿಕ್ಷಣ ನಮ್ಮ ರಾಜ್ಯದಲ್ಲಿ ಶೇಕಡಾ ೩ರಷ್ಟು ಮಾತ್ರ ಇದೆ. ಅದಕ್ಕಾಗಿ ವೃತ್ತಿಪರ ಶಿಕ್ಷಣವನ್ನು ವೃದ್ಧಿಸಲು ಹೊಸ ಯೋಜನೆಗಳನ್ನು ಹಾಕಿದ್ದೇವೆ. ಅದಕ್ಕೆ ೮ ಕೋಟಿ ರೂಪಾಯಿಗಳ ಒಂದು ಯೋಜನೆಯಾಗಿದೆ. ೧೭೫ ಕಾಲೇಜುಗಳಲ್ಲಿ ಸುಮಾರು ೯೯೧ ಕೋರ್ಸ್‌ಗಳನ್ನು ತೆಗೆಯುತ್ತಾ ಇದ್ದೇವೆ. ಪಿ.ಯು.ಸಿ. ಹಂತದಲ್ಲಿ ೧೫೦ ಕೋರ್ಸ್‌ಗಳನ್ನು ಪ್ರಾರಂಭಿಸಿದಾಗಿ ಮಾಡುತ್ತಾ ಇದ್ದೇವೆ. ೨೫೦ ಕೋರ್ಸ್‌ಗಳು ಈಗಾಗಲೇ ಇದ್ದು, ಇದರಿಂದಾಗಿ ಈ ವರ್ಷದಲ್ಲಿ ಹೆಚ್ಚಿಗೆ ಇದರಲ್ಲಿ ೭-೮ ಸಾವಿರ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಮಾಡಿಕೊಳ್ಳಬಹುದು. ಎಲ್ಲಾ ಕೋರ್ಸ್‌ಗಳಿಗೆ ಪ್ರವೇಶವನ್ನು ಕೊಟ್ಟಾಗ, ಅರ್ಹರಾಗಿ ತಕ್ಕಂಥವರಿಗೆ ಪ್ರವೇಶಾವಕಾಶ ತಪ್ಪುವುದಿಲ್ಲ. ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ಕೊಡಬೇಕೆಂಬ ನೀತಿಗೆ ಅನುಗುಣವಾಗಿ, ನಾವು ಹೊಸದನ್ನು ಏನನ್ನು ತರುತ್ತಿದ್ದೇವೆ, ಅದರಲ್ಲಿ ಯಾವುದೇ ರೀತಿಯ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳುತ್ತೇವೆ.

ಅಧ್ಯಕ್ಷರು.—ಈಗ ಮುಂದಿನ ಗಮನ ಸೆಳೆಯುವ ಸೂಚನೆ.....

ಶ್ರೀ ಚಿನ್ನಪ್ಪ —ಅಧ್ಯಕ್ಷರೆ...

ಅಧ್ಯಕ್ಷರು.—ಮಾನ್ಯ ಸಚಿವರು ಸಮರ್ಪಕವಾದಂಥ ಉತ್ತರವನ್ನು ಕೊಟ್ಟಿದ್ದಾರೆ ತಾವು ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಬಿ. ಆರ್. ನೀಲಕಂಠಪ್ಪ.—ಅಧ್ಯಕ್ಷರೇ, ಪ್ರತಿ ವರ್ಷದ ಅಡ್ಮಿಷನ್ ಕ್ಲೋಸ್ ಆಗುವುದಕ್ಕೂ ಈ ವರ್ಷದಕ್ಕೂ ವ್ಯತ್ಯಾಸ ಇದೆ. ಈ ವರ್ಷ ಕಳೆದ ಸೆಪ್ಟೆಂಬರ್, ಈಸಲದ ಮಾರ್ಚ್ ಮತ್ತು ಜೂನ್ ಪರೀಕ್ಷೆಗಳ ವಿದ್ಯಾರ್ಥಿಗಳು ಬರುತ್ತಾರೆ. ಆದ್ದರಿಂದ ಸೀಟ್ಸ್ ಜಾಸ್ತಿ ಬೇಕಾಗುತ್ತದೆ. ಈ ಫೇಲಾದವರಿಗಾಗಿ ಒಂದು ಅವಕಾಶ ಕೊಡುವುದೆಂದಾದರೆ ಅದರಲ್ಲಿ ಮತ್ತೆ ಫೇಲಾದವರಿಗಾಗಿ ಏನು ಮಾಡುತ್ತಾರೆ ? ಆದ್ದರಿಂದ ಈಗಿರುವ ಕಾಲೇಜಿನಲ್ಲಿ ಒಂದೊಂದು ಸೆಕ್ಷನ್ ಜಾಸ್ತಿ ಮಾಡಲಿ, ನಂತರ ಉಪಾಧ್ಯಾಯರ ಕೊರತೆ ಆಗಬಹುದು, ಅದಕ್ಕೆ ಇವರು ವ್ಯವಸ್ಥೆ ಮಾಡಬೇಕು. ಈ ಬಗ್ಗೆ ಭರವಸೆ ಬೇಕು.

ಶ್ರೀ ಚಂದ್ರಶೇಖರ ಪಾಮನಿ —ಎಸ್‌ಎಸ್‌ಎಲ್‌ಸಿ ಫಲಿತಾಂಶ ಎಲ್ಲರಿಗೂ ಕಾಲೇಜ್‌ಗಳಲ್ಲಿ ಸೀಟ್ ಕೊಡಲೇಬೇಕೆಂದೇನಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಬಾರದು. ವೃತ್ತಿಪರ ಶಿಕ್ಷಣದ ವ್ಯವಸ್ಥೆಯು ಗ್ರಾಮಾಂತರ ಪ್ರದೇಶ ಸೇರಿ ಎಲ್ಲ ಕಡೆ ಇಲ್ಲ. ಆದ್ದರಿಂದ ಜೂನಿಯರ್ ಕಾಲೇಜ್‌ಗಳಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಸೀಟನ್ನು ರಿಸರ್ವ್ ಮಾಡಬೇಕು.

ಶ್ರೀಲೀಲಾದೇವಿ ಆರ್. ಪ್ರಸಾದ್.—ಈಗಾಗಲೇ ಕೆಲವು ಕಡೆ ಅಡ್ಮಿಷನ್ಸ್‌ನ್ನು ಕ್ಲೋಸ್ ಮಾಡಿದ್ದಾರೆ. ನೀವು ಜೂನ್‌ನಲ್ಲಿ ರಿಸಲ್ಟ್ ಬಂದ ಮೇಲೆ ಸೇರಿಸಿಕೊಳ್ಳಲು ಅನುಕೂಲವಾಗುವಂತೆ ಆಲ್ಲಿಯವರೆಗೆ ಅಡ್ಮಿಷನ್ಸ್‌ನ್ನು ಸ್ಟೇ ಮಾಡಿಸಲು ಸಾಧ್ಯವೇ ?

ಶ್ರೀ ಬಿ. ಸೋಮಶೇಖರ್.—ಅಕಸ್ಮಾತ್ ಯಾವುದಾದರೂ ಕಾಲೇಜ್ ಅಡ್ಮಿಷನ್ಸ್‌ನ್ನು ಮುಂಗಿಸಿದ್ದರೆ ಹಾಗೆ ಮಾಡಲು ಬರುವುದಿಲ್ಲ. ಸೆಪ್ಟೆಂಬರ್ ಮತ್ತು ಮಾರ್ಚ್ ಹಾಗೂ ಜೂನ್ ವಿದ್ಯಾರ್ಥಿಗಳನ್ನೆಲ್ಲ ಸೇರಿಸಿ ಆರ್ಹ ವಿದ್ಯಾರ್ಥಿಗಳನ್ನು ಆರಿಸಿಕೊಳ್ಳುತ್ತೇವೆ. ಕೆಲವು ವಿದ್ಯಾರ್ಥಿಗಳು ಮೆಕ್ಯಾನಿಕಲ್ ಇಂಜಿನಿಯರಿಂಗ್ ಕೋರ್ಸ್‌ಗೆ ಹೋಗುವುದರಿಂದ ಎಲ್ಲರೂ ಕಾಲೇಜಿಗೆ ಸೇರಲು ಬಯಸುವುದಿಲ್ಲ. ಎಲ್ಲರಿಗೂ ಸೀಟ್ ಕೊಡುವುದು ಸರ್ಕಾರದ ನೀತಿಯಲ್ಲ. ಈ ದೃಷ್ಟಿಯಿಂದ ೨೫೦ ವೃತ್ತಿ ಶಿಕ್ಷಣ ಕೋರ್ಸ್‌ಗಳನ್ನು ತೆರೆಯುತ್ತಿದ್ದೇವೆ, ಅದಕ್ಕಾಗಿ ಕೇಂದ್ರದಿಂದ ೮ ಕೋಟಿ ರೂಗಳ ಯೋಜನೆಯನ್ನು ಮಂಜೂರು ಮಾಡಿಸಿಕೊಂಡಿದ್ದೇವೆ. ನಾನು ಭರವಸೆ ಕೊಡುತ್ತೇನೆ. ಅರ್ಹತೆ ಹೊಂದಿರುವ ತಕ್ಕ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ. ಎಲ್ಲರಿಗೂ ಪ್ರವೇಶವಿರುತ್ತದೆ.

— ಗಲಭೆ —

ಶ್ರೀ ಬಿ. ಆರ್. ನೀಲಕಂಠಪ್ಪ.—ನಾನು ಹೇಳುತ್ತಿದ್ದೇನೆ, ಈ ವರ್ಷಕ್ಕೂ ಪ್ರತಿವರ್ಷಕ್ಕೂ ವ್ಯತ್ಯಾಸ ಇದೆ. ಆದ್ದರಿಂದ ಈ ಸಲ ವಿಶೇಷ ವ್ಯವಸ್ಥೆ ಮಾಡಬೇಕು.

ಶ್ರೀ ಬಿ. ಸೋಮಶೇಖರ.—ನಾನು ಆಗಲೇ ಹೇಳಿದಂತೆ ೨೫೦ ಕಾಲೇಜುಗಳಲ್ಲಿ ವೃತ್ತಿ ಶಿಕ್ಷಣ ಕೋರ್ಸನ್ನು ಇಂಟರ್‌ಡ್ಯೂಸ್ ಮಾಡಿದ್ದೇವೆ. ಅವರಿಗೆ ಆದ್ಯತೆ ಕೊಡಬೇಕು. ಕೊಡುತ್ತೇವೆ ಅವರಲ್ಲಿ ಎಲ್ಲರಿಗೂ ಅವಕಾಶವಾಗುವುದು.

(೩) ರಾಜ್ಯದಲ್ಲಿ ಔಷಧಿ ವ್ಯಾಪಾರಗಳ ಮುಷ್ಕರದಿಂದ ಸಾರ್ವಜನಿಕರಿಗೆ ಔಷಧಿಗಳಿಂ ದೊರಕದ ಅನಾನುಕೂಲ ಆಗುವ ಬಗ್ಗೆ,

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಕೆಮಿಸ್ಟ್ ಅಂಡ್ ಡ್ರಗ್ಗಿಸ್ಟ್ ಅಂಗಡಿಗಳು ಮುಷ್ಕರ ಮಾಡಿದ್ದರಿಂದಾಗಿ ಅತ್ಯವಶ್ಯಕ ಔಷಧಿಗಳು ದೊರೆಯದೆ ಸಾರ್ವಜನಿಕರಿಗೆ ಆಗಿರುವ ತೊಂದರೆಗಳ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು.—ಮಾನ್ಯ ಆರೋಗ್ಯ ಮಂತ್ರಿಯವರು.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಬೇಡಿಕೆಗಳ ಬಗ್ಗೆ ಅಖಿಲ ಭಾರತ ಔಷಧ ವ್ಯಾಪಾರಿಗಳ ಸಂಘ ದಿನಾಂಕ ೨೫-೬-೮೮ ರಂದು ಬಂದ್ ಆಚರಿಸಲು ಕರೆ ನೀಡಿತ್ತು.

1. Better margin for the Retailers in the Drug Price Control Order.
2. Abolition of tax for drugs.
3. Professional status for Pharmacists.

ಅದರಂತೆ ದಿನಾಂಕ ೨೫-೬-೮೮ ರಂದು ಸಾಮಾನ್ಯವಾಗಿ ಔಷಧಿ ವ್ಯಾಪಾರಿಗಳ ಅಂಗಡಿಗಳು ಮುಚ್ಚಿದ್ದರೂ ಸಹ ಈ ಕೆಳಕಂಡ ಅಂಗಡಿಗಳು ಬೆಂಗಳೂರು ನಗರದಲ್ಲಿ ತೆರೆದಿದ್ದವು. ಜನತಾ ಬಜಾರ್ ಕೆ. ಜಿ. ರಸ್ತೆ, ಬೆಂಗಳೂರು, ಜನತಾ ಬಜಾರ್ ಜಯನಗರ, ಜನತಾ ಬಜಾರ್, ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು ಜನತಾ ಬಜಾರ್. ಇ ಎಸ್.ಐ. ಆಸ್ಪತ್ರೆ, ರಾಜಾಜಿನಗರ, ಬೆಂಗಳೂರು. ಜನತಾ ಬಜಾರ್. ಕೆಮ್ಕೋ ಬೆಂಗಳೂರು. ಕಲ್ಪತರು, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು, ಸಹಕಾರಿ ವಸ್ತುಭಂಡಾರ ರಾಜಾಜಿನಗರ, ಬೆಂಗಳೂರು, ಪಾಪ್ಯುಲರ್ ಡ್ರಗ್ಗಿಸ್ಟ್, ಸಿಟಿ ಮಾರ್ಕೆಟ್, ಬೆಂಗಳೂರು. ಇದೇ ತರಹದ ವ್ಯವಸ್ಥೆಯನ್ನು ಜಿಲ್ಲಾ ಕೇಂದ್ರಗಳಲ್ಲಿಯೂ ಕೂಡ ಮಾಡಲಾಗಿತ್ತು. ಆದರೆ ಔಷಧಿಗಳು ಸಿಗಲಿಲ್ಲವೆಂದು ಯಾರಿಂದಲೂ ದೂರುಗಳು ಇದುವರೆಗೂ ಈ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ. ಇದು ಅಖಿಲ ಭಾರತ ಸಮಸ್ಯೆಯಾದ್ದರಿಂದ ಇದನ್ನು ತಡೆಗಟ್ಟಲು ಸಾಧ್ಯವಾಗಲಿಲ್ಲ. ದೆಹಲಿಯಿಂದ ಬಂದ ವರದಿಗಳ ಪ್ರಕಾರ ಈ ಬಂದ್ ಸಂಪೂರ್ಣವಾಗಿ ಯಶಸ್ವಿಯಾಗಿರುವುದಿಲ್ಲ. ಹೆಚ್ಚಿನ ಔಷಧ ವ್ಯಾಪಾರಿಗಳು ಮಧ್ಯಾಹ್ನದ ಮೇಲೆ ಅವರ ಅಂಗಡಿಗಳನ್ನು ತೆರೆದಿದ್ದರು.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಔಷಧಿಗಳು ಸಿಗಲಿಲ್ಲವೆಂದು ಯಾರಿಂದಲೂ ದೂರು ಬಂದಿಲ್ಲವೆಂದು ಉತ್ತರದಲ್ಲಿ ಮಾನ್ಯ ಸಚಿವರು ಹೇಳಿದ್ದಾರೆ. ಔಷಧ ಸಿಗಲಿಲ್ಲವೆಂದು ಹೆಲ್ತ್ ಇಲಾಖೆಯ ಸೆಕ್ರೆಟರಿಗೆ ಬರೆಯುವುದಕ್ಕಾಗುವುದಿಲ್ಲ. ೮ ಅಂಗಡಿಗಳು ಬೆಂಗಳೂರಿನಲ್ಲಿ ತೆರೆದಿದ್ದವು ಎಂದು ಹೇಳಿದ್ದೀರಿ. ಮುಖ್ಯವಾಗಿ ಜನತಾ ಬಜಾರ್‌ಗಳು ತೆರೆದಿದ್ದವು. ನಿನ್ನೆ ನಾನು ಜನತಾ ಬಜಾರ್‌ಗೆ ಹೋಗಿದ್ದೆ. ಮೆಜೆಸ್ಟಿಕ್ ವೃತ್ತದಲ್ಲಿರುವ ಜನತಾ ಬಜಾರ್‌ನಲ್ಲಿಕ್ಕೂ ನೋಡಿ ವಾಪಸ್ ಬರಬೇಕಾಯಿತು. ಕೆಲವರಿಗೆ ಔಷಧಿಗಳು ಸಿಕ್ಕಿತು, ಮತ್ತೆ ಕೆಲವರಿಗೆ ಔಷಧಿಗಳು ದೊರೆಯಲಿಲ್ಲ. ಯಾಷ್ಮುವಲ್ ಆಗಿ ಇರುವ ಡ್ರಗ್ಸ್ ಅನ್ನು ಮಾರಾಟ ಮಾಡಿದ್ದಾರೆ. ಡ್ರಗ್ಸ್ ಅಂಡ್ ಕೆಮಿಸ್ಟ್ ಅಸೋಸಿಯೇಷನ್‌ನವರು ಏನು ಬೇಡಿಕೆಗಳನ್ನು ಇಟ್ಟಿದ್ದಾರೆ ಅವುಗಳಲ್ಲಿ ಕೆಲವು ಕೇಂದ್ರ ಸರಕಾರಕ್ಕೆ ಇನ್ನು ಕೆಲವು ರಾಜ್ಯ ಸರಕಾರಕ್ಕೆ ಸಂಬಂಧಪಟ್ಟಿದ್ದು ಆಗಿವೆ. ಉದಾಹರಣೆಗೆ ಹೇಳುವುದಾದರೆ ಟ್ಯಾಕ್ಸ್ ಎಕ್ಸೆಂಪ್ಷನ್ ಕೇಳುತ್ತಿದ್ದಾರೆ. ಸೇಲ್ಸ್ ಟ್ಯಾಕ್ಸ್ ನಮ್ಮ ರಾಜ್ಯ ಸರಕಾರಕ್ಕೆ ಸಂಬಂಧಪಡುತ್ತದೆ ನಮ್ಮಲ್ಲಿ ಔಷಧಿಗಳ ಮೇಲಿರತಕ್ಕಂಥ ಸೇಲ್ಸ್ ಟ್ಯಾಕ್ಸ್ ಅನ್ನು ಪರಿಶೀಲನೆ ಮಾಡಿದರೆ ಗೊತ್ತಾಗುತ್ತೆ ಆಂಧ್ರ ಪ್ರದೇಶ ಮತ್ತು ತಮಿಳುನಾಡು, ವೆಸ್ಟ್ ಬೆಂಗಾಲ್ ಮುಂತಾದ ರಾಜ್ಯಗಳಿಗೂ ಕರ್ನಾಟಕ ರಾಜ್ಯಕ್ಕೂ ಔಷಧ ಮಾರಾಟ ತೆರಿಗೆಯಲ್ಲಿ ಎಷ್ಟು ವ್ಯತ್ಯಾಸವಿದೆ ಎಂದು. ಅಲ್ಲಿ ಔಷಧಿಗಳ ಮೇಲೆ ೬ ಪರ್ಸೆಂಟ್ ಮಾರಾಟ ತೆರಿಗೆಯನ್ನು ವಿಧಿಸುತ್ತಿದ್ದಾರೆ. ನಮ್ಮಲ್ಲಿ ೧೦ ರಿಂದ ೧೫ ಪರ್ಸೆಂಟ್‌ನಷ್ಟು.